ಬಿ) ಉಡುಪಿ ತಾಲ್ಲೂಕು ಹೆರ್ಗಾ ಗ್ರಾಮಕ್ಕೆ ಸೇರಿದ ಈಶ್ವರ ನಗರ ಮತ್ತು ಶಾಂತಿನಗರದಲ್ಲಿರುವ ವಸತಿಗೃಹಗಳಿಗೆ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ ಯಡಿಯಲ್ಲಿ ಸರ್ಕಾರವು ನೀರು ಸರಬರಾಜು ಯೋಜನೆಯನ್ನು ಮಂಜೂರು ಮಾಡುವುದೆ ?

ಸಿ) ಬಜೆ ಗ್ರಾಮದಿಂದ ಆಗುತ್ತಿರುವ ನೀರು ಸರಬರಾಜು ಸದ್ಯಕ್ಕೆ ಸಾಲದೇ ಇರುವುದರಿಂದ ಸರ್ಕಾರವು ೧೯೮೬-೮೭ನೇ ಸಾಲಿನಲ್ಲಿ, ಸ್ವರ್ಣ ನದಿ ನೀರು ಸರಬರಾಜು ಯೋಜನೆಯನ್ನು ಮಂಜೂರು ಮಾಡುವುದೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ಯ ಸಚಿವರು).—

ಎ) ೧) ಈ ಯೋಜನೆಯು ಸರ್ಕಾರದ ಮಂಜೂರಾತಿಗಾಗಿ ಪರಿಶೀಲನೆಯಲ್ಲಿದೆ.

೨) ಈ ಯೋಜನೆಯು ಮಂಜೂರಾತಿಗಾಗಿ ಸರ್ಕಾರದ ಪರಿಶೀಲನೆಯಲ್ಲಿದೆ.

೩) ದಿನಾಂಕ ೨೭-೧೨-೧೯೮೫ರಂದು ಮತ್ತೊಂದು ಕೊಳವೆ ಬಾವಿಗೆ ಸರ್ಕಾರದ ಮಂಜೂರಾತಿನೀಡಿದೆ.

ಬಿ) ಸದ್ಯಕ್ಕೆ ಈ ಬಗ್ಗೆ ಪ್ರಸ್ತಾಪನೆ ಇಲ್ಲ.

ಸಿ) ಈ ವಿಷಯವು ವಸತಿ ಹಾಗೂ ನಗರಾಭಿವೃದ್ಧಿ ಇಲಾಖೆಗೆ ಸಂಬಂದಿಸಿದ್ದು. ಈ ಇಲಾಖೆಯಂ ವ್ಯಾಪ್ತಿಗೆ ಬರುವುದಿಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್.—ಸಭಾಧ್ಯಕ್ಷರೇ ನನ್ನ ಬಿ ಪ್ರಶ್ನೆಗೆ ಸದ್ಯಕ್ಕೆ ಆ ಬಗ್ಗೆ ಪ್ರಸ್ತಾವನೇ ಇಲ್ಲ ಎಂದಿದ್ದಾರೆ. ಅಂದರೆ ಅಲ್ಲಿ ಜನ ನೀರಿಲ್ಲದೆ ಸಾಯಬೇಕು ಎಂದರ್ಥವೇ? ಎಲ್ಲರೂ ನಜೀರ್‌ಸಾಬರನ್ನು ನೀರುಸಾಬರು ಎಂದು ಕರೆಯುತ್ತಿದ್ದರೂ ಅವರು ಏಕೆ ನೀರು ಪೂರೈಕೆಗೆ ಆಶ್ವಾಸನೆ ಕೊಡುತ್ತಿಲ್ಲ?

ಅಧ್ಯಕ್ಷರು.—ಕೊಡಿರಿ ಆಶ್ವಾಸನೆಯನ್ನು.

ಶ್ರೀ ಬಿ.ಆರ್. ಯಾವಗಲ್.—ಅಧ್ಯಕ್ಷರೇ ಇದು ಭಾರದ ಆಶ್ವಾಸನೆಯಾಗುತ್ತದೆ. ೯ ಲಕ್ಷ ರೂಪಾಯಿಗಳು ಬೇಕು. ಅಂದಾಜು ತಯಾರಿಸಿಟ್ಟಿದ್ದೇವೆ. ಹತ್ತಿರದ ಶಾಂತಿನಗರ ಮಂತ್ತಿತರ ಪ್ರದೇಶಗಳೂ ಬೆಳೆಯುತ್ತಿವೆ. ಆದರೆ ಇಷ್ಟೊಂದು ಹಣ ಸದ್ಯಕ್ಕೆ ಕೊಡಲು ಸಾಧ್ಯವಿಲ್ಲ. ಮುಂದೆ ಇದನ್ನು ಪರಿಶೀಲಿಸಲಾಗುವುದು.

ಶ್ರೀಮತಿ ಮನೋರಮಾ ಮಧ್ವರಾಜ್.—ಎಷ್ಟು ಸಮಯಕ್ಕೆ ಮಾಡಿಸಿಕೊಡುತ್ತೀರಿ ಎಂದು ಹೇಳಬೇಕು.

ಅಧ್ಯಕ್ಷರು.—ಆದಷ್ಟು ಬೇಗ ಎಂದು ಹೇಳಿ.

ಶ್ರೀ ಅಬ್ದುಲ್ ನಜೀರ್ ಸಾಬ್.—ಬೇಗ ಮಾಡಿಸಿಕೊಟ್ಟರೆ ಅವರಿಗಿಂತ ಸಂತೋಷ ನಮಗೇ ಜಾಸ್ತಿ. ಕೊಳವೆ ಬಾವಿ ಬೇಕಾದರೆ ಕೇಳಿ, ತಕ್ಷಣವೇ ಹಾಕಿಸಿಕೊಡುತ್ತೇನೆ. ಆದರೆ ಕೊಳವೆ ಮುಖಾಂತರ ನೀರು ಪೂರೈಕೆ ಮಾಡಬೇಕೆಂದರೆ ಸಾಧ್ಯ ಸಂಪನ್ಮೂಲದ ಕೊರತೆ ಇದೆ. ಅವಕಾಶವಾದರೆ ಮುಂದಿನ ವರ್ಷ ಮಾಡಿಸುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಮಂಡಲ್ ಪಂಚಾಯಿತ್‌ನ ಸಿಬ್ಬಂದಿಗಾಗಿ ಸೇವಾ ಭದ್ರತೆ.

೧೫೩೫ ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಲಿ ಪುನರ್ ವಿಂಗಡಿಸಿರುವಂತೆ ಮಂಡಳ ಪಂಚಾಯ್ತಿಗಳಿಗೆ ಎಷ್ಟು ಪುರಸಭೆಗಳನ್ನು ಸೇರಿಸಲಾಗಿದೆ ಹಾಗೂ ಅವುಗಳ ಸಿಬ್ಬಂದಿಯನ್ನು ಮುಂದೆ ಯಾವ ಇಲಾಖೆಗೆ ವಹಿಸಲಾಗುವುದು

ಮತ್ತು ಯಾವ ದರ್ಜೆಯಲ್ಲಿ ಮುಂದುವರಿಸಲಾಗುವುದು ಮತ್ತು ಅವರಿಗೆ ಸೇವಾ ಸೌಲಭ್ಯದ ಖಾತ್ರಿ ನೀಡಲಾಗುವುದೆ?

ಆ) ಕೆಲವಡೆ ಹಿಂದಿನ ಗ್ರೂಪ್ ಪಂಚಾಯ್ತಿಗಳನ್ನು ವಿಭಾಗಿಸಿ ಮಂಡಲ್ ಪಂಚಾಯ್ತಿಗಳಿಗೆ ಹಳ್ಳಿಗಳನ್ನು ವಿಂಗಡಿಸಿರುವುದರಿಂದ ಅಸ್ತಿ, ಜವಾಬ್ದಾರಿ ವಿಲೆಯಲ್ಲಿ ತೊಂದರೆಯಾಗುವುದಿಲ್ಲವೇ ಹಾಗಿದ್ದಲ್ಲಿ ಹಿಂದಿನ ಗ್ರೂಪ್ ಪಂಚಾಯ್ತಿ ಒಂದೇ ಕಡೆ ಸೇರುವಂತೆ ಮಾಡಿ ಈ ತೊಂದರೆ ತಪ್ಪಿಸಬಹುದೆ?

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು

ಅ) ಸರ್ಕಾರ ೧೦,೦೦೦ ಅಥವಾ ಅದಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪುರಸಭೆಗಳನ್ನು ಮಾತ್ರ ಮಂಡಲ್ ಪಂಚಾಯತ್ಗಾಗಿ ಪರಿವರ್ತಿಸಿರುತ್ತೆ, ೭೧ ಪುರಸಭೆಗಳು ದಿನಾಂಕ ೨೦-೧-೧೯೮೬ ರಂದು ಮಂಡಲ್ ಪಂಚಾಯ್ತಿಗಳಾಗಿ ಅಸ್ತಿತ್ವಕ್ಕೆ ಬಂದಿವೆ. ಜಿಲ್ಲಾ ಪರಿಷತ್ ಕಾಯಿದೆಯಲ್ಲಿ ಪುರಸಭೆಗಳಲ್ಲಿ ಕೆಲಸ ಮಾಡುತ್ತಿದ್ದ ಸಿಬ್ಬಂದಿ ವರ್ಗದವರೆಲ್ಲರೂ ಈ ಕಾಯಿದೆಯಡಿಯಲ್ಲಿ ಬೇರೆ ವ್ಯವಸ್ಥೆ ಮಾಡುವ ತನಕ ಪರಿವರ್ತಿಸಿದ ಮಂಡಲಗಳಲ್ಲಿ ಮುಂದುವರಿಯುವ ಅವಕಾಶವಿರುವುದರಿಂದ ಎಲ್ಲಾ ಸಿಬ್ಬಂದಿಯವರು ಪುರಸಭೆಗಳಲ್ಲಿದ್ದ ದರ್ಜೆಯಲ್ಲೇ ಮುಂದುವರಿಯುತ್ತಿದ್ದಾರೆ. ಇವರ ಸೇವೆಯನ್ನು ಮಂಡಲ್ ಪಂಚಾಯತಿಗಳಲ್ಲಿ ಮುಂದುವರಿಸಲು ಸರಕಾರದ ಪರಿಶೀಲನೆಯಲ್ಲಿದೆ.

ಆ) ಇಂತಹ ಸನ್ನಿವೇಶಗಳು ಯಾವ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಹಾಗೆ ಬಂದಲ್ಲಿ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದು.

ರಾಜ್ಯದಲ್ಲಿರುವ ಖಾಸಗಿ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಸರಕಾರಿ ಅನುದಾನದ ಮಂಜೂರಾತಿ.

೧೭೪೦ ಶ್ರೀ ಶಿವಶೇಖರಪ್ಪ ಗೌಡ ಶರವಾಳ (ಶಹಾಪುರ) —ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಖಾಸಗೀ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಸರಕಾರವು ಅನುದಾನ ನೀಡುತ್ತಿದೆಯೇ?

ಆ) ಹಾಗಿದ್ದಲ್ಲಿ ಯಾವ ನಿಯಮಾವಳಿಯನ್ನು ಸರ್ಕಾರದವರು ಅನುಸರಿಸುತ್ತಿದ್ದಾರೆ?

ಇ) ಹೈದ್ರಾಬಾದ್ ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ಖಾಸಗಿ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಅನುದಾನ ನೀಡಿ ಅನುಸರಿಸುವರೇ?

ಈ) ಹಾಗಿದ್ದಲ್ಲಿ ಈ ತಾರತಮ್ಯ ಧೋರಣೆಯನ್ನು ಸರ್ಕಾರದವರು ಶೀಘ್ರವಾಗಿ ನಿವಾರಿಸುವರೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ.—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು.

ಅ) ಹಳೇ ಮೈಸೂರು ಪ್ರದೇಶ ಮತ್ತು ಬಾಂಬೆ ಕರ್ನಾಟಕ ಪ್ರದೇಶದ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಅನುದಾನ ಕೊಡಲಾಗುತ್ತಿದೆ.

ಆ) ಮೈಸೂರು ಎಜುಕೇಷನಲ್ ಮ್ಯಾನ್ಯುಯಲ್ ವಾಲ್ಯೂಮ್ ೭ರ ನಿಯಮಗಳನ್ನು ಅನುಸರಿಸಲಾಗುತ್ತಿದೆ.

ಇ) ಮತ್ತು ಈ) ವಿಕಲ್ಪಿತ ಅನುದಾನ ಪದ್ಧತಿಯನ್ನು ಜಾರಿಗೆ ತರುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.